ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ

**BANGALORE WATER SUPPLY AND SEWERAGE BOARD**

ನಂ.ಬೆ.ಜ.ಮಂ/ಸಿ.ಹೆಚ್/ಸಿ.ಇ.(ಎಂ)/ /2009 ದಿನಾಂಕ:-05.02.2009

## ಸುತ್ತೋಲೆ

ವಿಷಯ: ನೀರು ಸರಬರಾಜು ಶುಲ್ಕ ಪಾವತಿ

ಬೆಂಗಳೂರು ಜಲಮಂಡಲಿಯ ಮಾಪನ ಓದುಗರು ಮತ್ತು ಜಲಪರಿವೀಕ್ಷಕರು ಮುಂತಾದ ಸಿಬ್ಬಂದಿ ವರ್ಗದವರು ಮನೆಗಳಿಗೆ ಸರಬರಾಜು ಮಾಡುವ ನೀರಿನ ಬಿಲ್ ಸಂಬಂಧದಲ್ಲಿ ನಗದು ರೂಪದಲ್ಲಿ ಬಳಕೆದಾರರಿಂದ ಬಾಕಿ ಇರುವ ಬಿಲ್ ಮೊತ್ತವನ್ನು ಸಂಗ್ರಹಿಸುತ್ತಿರುವ ವಿಷಯ ಮಂಡಲಿಯ ಗಮನಕ್ಕೆ ಬಂದಿರುತ್ತದೆ. ಬಳಕೆದಾರರಿಂದ ಸಿಬ್ಬಂದಿ ವರ್ಗದವರು ನಗದು ರೂಪದಲ್ಲಿ ಬಿಲ್ ಮೊತ್ತವನ್ನು ಸಂಗ್ರಹಿಸುವ ವಿಷಯದ ಬಗ್ಗೆ ಕೆಲವು ಪ್ರಶ್ನೆಗಳು ಉದ್ಭವಿಸಿರುತ್ತವೆ. ಇಂತಹ ಪ್ರಕರಣಗಳಲ್ಲಿ ನಗದು ರೂಪದಲ್ಲಿ ನೀರಿನ ಶುಲ್ಕವನ್ನು ಸಂಗ್ರಹಿಸಿದ ನಂತರ ಆ ಮೊತ್ತವನ್ನು ಮಂಡಲಿಗೆ ಸಕಾಲಕ್ಕೆ ಪಾವತಿ ಮಾಡದೇ ಇರುವ ಕೆಲವು ಘಟನೆಗಳು ನಡೆದಿರುವುದಾಗಿ ದೂರುಗಳು ಬಂದಿರುತ್ತವೆ. ಇಂತಹ ಪ್ರಕರಣಗಳಲ್ಲಿ ಬಿಲ್ ಪಾವತಿ ಆಗದೆ, ನಂತರ ಬಿಲ್ ಮೇಲಿನ ಬಡ್ಡಿ ಹೆಚ್ಚುತ್ತಾ ಹೋಗಿ ಕೆಲವಾರು ಗೊಂದಲಗಳು ಸೃಷ್ಟಿಯಾಗುತ್ತಿವೆ.

ಈ ಮೇಲ್ಕಂಡ ಕಾರಣಗಳಿಂದಾಗಿ ಮಾಪನ ಓದುಗರು ಮತ್ತು ಜಲಪರಿವೀಕ್ಷಕರು ಮುಂತಾದ ಸಿಬ್ಬಂದಿ ವರ್ಗದವರು ಗ್ರಾಹಕರಿಂದ ನಗದು ರೂಪದಲ್ಲಿ ಬಿಲ್ ಮೊತ್ತವನ್ನು ಸಂಗ್ರಹಿಸಬಾರದೆಂದು ಸೂಚಿಸಲಾಗಿದೆ. ಬಿಲ್ ವಸೂಲಿ ಸಂದರ್ಭಗಳಲ್ಲಿ ಮಂಡಲಿಯ ಸಿಬ್ಬಂದಿ ಗ್ರಾಹಕರಿಂದ ಬಿಲ್ ಮೊತ್ತವನ್ನು ನಗದು ರೂಪದಲ್ಲಿ ಸ್ವೀಕರಿಸುವ ಬದಲು ಈ ಕೆಳಕಂಡ ರೀತಿಯಲ್ಲಿ ಹಣ ಪಾವತಿ ಮಾಡಲು ಗ್ರಾಹಕರಿಗೆ ಅರಿವು ಮೂಡಿಸಬೇಕಾಗಿ ಸೂಚಿಸಲಾಗಿದೆ.

1. ಬೆಂಗಳೂರು ಜಲಮಂಡಲಿ ಕಿಯೋಸ್ಕ್ ಕೇಂದ್ರಗಳು
2. ಬ್ಯಾಂಕ್‌ಗಳಲ್ಲಿನ ಇ.ಸಿ.ಎಸ್. ಪದ್ಧತಿ
3. ಬೆಂಗಳೂರು-1 ಕೇಂದ್ರಗಳು

ಈ ಮೇಲ್ಕಂಡ ಸೂಚನೆಗಳ ನಂತರವೂ ಜಲಮಂಡಲಿ ಸಿಬ್ಬಂದಿ ಗ್ರಾಹಕರಿಂದ ನೇರವಾಗಿ ನಗದು ರೂಪದಲ್ಲಿ ನೀರಿನ ಬಿಲ್ ಮೊತ್ತವನ್ನು ಸಂಗ್ರಹಿಸುವ ಯಾವುದೇ ದೂರುಗಳು ಬಂದಲ್ಲಿ ಅವುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದಲ್ಲದೆ, ಅಂತಹ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು
ಬೆಂಗಳೂರು ಜಲಮಂಡಲಿ

ಮುಖ್ಯ ಅಭಿಯಂತರರು-ನಿರ್ವಹಣೆ/ಆರ್ಥಿಕ ಸಲಹೆಗಾರರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
ಅಪರ ಮುಖ್ಯ ಅಭಿಯಂತರರು-ನಿರ್ವಹಣೆ 1 ಮತ್ತು 2 ಸೂಕ್ತ ಕ್ರಮಕ್ಕಾಗಿ
ನಿರ್ವಹಣ ವಿಭಾಗದ ಎಲ್ಲ ಕಾರ್ಯನಿರ್ವಾಹಕ ಅಭಿಯಂತರರು ತಮ್ಮ ಸಿಬ್ಬಂದಿಗೆ ಕಟ್ಟುನಿಟ್ಟಾದ ಮಾರ್ಗದರ್ಶನ ನೀಡಲು ಸೂಚಿಸಿದೆ
ಸಾರ್ವಜನಿಕ ಸಂಪರ್ಕ ಅಧಿಕಾರಿ ಪತ್ರಿಕೆಗಳಿಗೆ ಬಿಡುಗಡೆ ಮಾಡಲು ಸೂಚಿಸಿದೆ